# ಕುವೆಂಪು ಕಾವ್ಯದಲ್ಲಿ ಶೈಕ್ಷಣಿಕ ಚಿಂತನೆಗಳು: ವಸಾಹತುಶಾಹಿ ಮುಖಾಮುಖಿ ಮತ್ತು ಭಾಷಾ ರಾಜಕಾರಣದ ವಿಶ್ಲೇಷಣೆ

**ಶಿವಕುಮಾರ ಸಿ.***

**DOI: https://doi.org/10.5281/zenodo.21189396**

**ABSTRACT**

ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯಕ ಕೊಡುಗೆಗಳು ಕೇವಲ ಕಲಾತ್ಮಕ ಸೌಂದರ್ಯಕ್ಕೆ ಸೀಮಿತವಾಗದೆ, ಸಾಮಾಜಿಕ ಮತ್ತು ಶೈಕ್ಷಣಿಕ ಪುನರ್ರಚನೆಯ ಪ್ರಬಲ ದನಿಗಳಾಗಿವೆ. ಪ್ರಸ್ತುತ ಸಂಶೋಧನಾ ಪ್ರಬಂಧವು ಕುವೆಂಪು ಅವರ ಕಾವ್ಯದಲ್ಲಿ ಅಂತರ್ಗತವಾಗಿರುವ ಶೈಕ್ಷಣಿಕ ಚಿಂತನೆಗಳನ್ನು ವಸಾಹತುಶಾಹಿ ಶಿಕ್ಷಣ ನೀತಿಯ ಸವಾಲುಗಳು, ಭಾಷಾ ಹಿತಾಸಕ್ತಿ ಮತ್ತು ತ್ರಿಭಾಷಾ ಸೂತ್ರದ ರಾಜಕಾರಣದ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತದೆ. ಬ್ರಿಟಿಷ್ ಶಿಕ್ಷಣ ನೀತಿಯು ತಂದ ಜ್ಞಾನೋದಯದ ಧನಾತ್ಮಕ ಆಯಾಮಗಳನ್ನು ಒಪ್ಪಿಕೊಳ್ಳುತ್ತಲೇ, ಅದು ದೇಶೀಯ ಭಾಷೆಗಳ ಮೇಲೆ ಹೇರಿದ ಸಾಂಸ್ಕೃತಿಕ ದಾಸ್ಯವನ್ನು ಕುವೆಂಪು ತಮ್ಮ ಕಾವ್ಯದ ಮೂಲಕ ಹೇಗೆ ಪ್ರತಿರೋಧಿಸಿದರು ಎಂಬುದನ್ನು ಈ ಲೇಖನವು ಶೈಕ್ಷಣಿಕ ಚೌಕಟ್ಟಿನಲ್ಲಿ ಮೌಲೀಕರಿಸುತ್ತದೆ.

**KEYWORDS:** ವಸಾಹತುಶಾಹಿ ಶಿಕ್ಷಣ, ಭಾಷಾ ದಾಸ್ಯ, ತ್ರಿಭಾಷಾ ಸೂತ್ರ, ಸ್ವದೇಶಿ ಜ್ಞಾನಮೀಮಾಂಸೆ, ಪ್ರತಿರೋಧದ ಕಾವ್ಯ.

* **ಡಾ. ಶಿವಕುಮಾರ ಸಿ.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ, ಪಾಂಡವಪುರ, ಮಂಡ್ಯ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಯುಗಪ್ರವರ್ತಕ ಕವಿಯಾಗಿ ಮೂಡಿಬಂದ ಕುವೆಂಪು (ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ) ಅವರ ಕಾವ್ಯವು ಸಮಾನತೆ, ವೈಚಾರಿಕತೆ ಮತ್ತು ವಿಶ್ವಾತ್ಮಕ ಪ್ರಜ್ಞೆಯ ಭದ್ರ ಬುನಾದಿಯ ಮೇಲೆ ನಿರ್ಮಾಣಗೊಂಡಿದೆ. ಪರಂಪರೆಯ ಮೌಢ್ಯಗಳನ್ನು ಮತ್ತು ಶೋಷಕ ವ್ಯವಸ್ಥೆಯನ್ನು ಕಾವ್ಯದ ಮೂಲಕ 'ಪ್ರಶ್ನಿಸುವುದು' ಕುವೆಂಪು ಅವರ ಸೃಜನಶೀಲತೆಯ ಮೂಲ ಆಶಯವಾಗಿದೆ. ಕುವೆಂಪು ಅವರ ಕಾವ್ಯವನ್ನು ಕುರಿತು ಈಗಾಗಲೇ ಪರಿಸರ ಪ್ರಜ್ಞೆ, ಆಧ್ಯಾತ್ಮಿಕತೆ ಹಾಗೂ ನಾಡು-ನುಡಿಯ ಆಯಾಮಗಳಲ್ಲಿ ವ್ಯಾಪಕ ಸಂಶೋಧನೆಗಳು ನಡೆದಿವೆಯಾದರೂ, ಅವರ ಕಾವ್ಯದಲ್ಲಿ ಅಡಗಿರುವ ಶೈಕ್ಷಣಿಕ ದರ್ಶನ ಮತ್ತು ಸಾಂಸ್ಕೃತಿಕ ಭಾಷಾ ರಾಜಕಾರಣದ ಬಗೆಗಿನ ಒಳನೋಟಗಳನ್ನು ವ್ಯವಸ್ಥಿತವಾಗಿ ಕ್ರೋಢೀಕರಿಸುವ ಅಗತ್ಯವಿದೆ. ಪ್ರಸ್ತುತ ಲೇಖನವು ಕುವೆಂಪು ಅವರ ಕಾವ್ಯ ಪ್ರತಿಭೆಯು ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿದ್ದ ಸಾಂಸ್ಕೃತಿಕ ವಲಸೆ ಮತ್ತು ಭಾಷಾ ಹೇರಿಕೆಯನ್ನು ಹೇಗೆ ಗ್ರಹಿಸಿತ್ತು ಎಂಬುದನ್ನು ಸೈದ್ಧಾಂತಿಕವಾಗಿ ಚರ್ಚಿಸುತ್ತದೆ.

**ವಸಾಹತುಶಾಹಿ ಶಿಕ್ಷಣ: ಜ್ಞಾನೋದಯ ಮತ್ತು ಸಾಂಸ್ಕೃತಿಕ ಸಂಘರ್ಷ**

ಬ್ರಿಟಿಷರು ಭಾರತದಲ್ಲಿ ಜಾರಿಗೆ ತಂದ ವಸಾಹತುಶಾಹಿ ಶಿಕ್ಷಣ ನೀತಿಯು ದ್ವಂದ್ವಾತ್ಮಕ ಸ್ವರೂಪವನ್ನು ಹೊಂದಿತ್ತು. ಒಂದು ಕಡೆಯಿಂದ, ಈ ಶಿಕ್ಷಣವು ಅನಾದಿಕಾಲದಿಂದಲೂ ಅಕ್ಷರದ ಅರಿವನ್ನೇ ಕಾಣದ ಬಹುಜನ ಸಮುದಾಯಗಳಿಗೆ ಮತ್ತು ಶೋಷಿತ ವರ್ಗಗಳಿಗೆ ಜ್ಞಾನದ ಹೆಬ್ಬಾಗಿಲನ್ನು ತೆರೆಯಿತು. ಪ್ರಥಮ ತಲೆಮಾರಿನ ಈ ಶಿಕ್ಷಿತ ಸಮುದಾಯಗಳು ತಮ್ಮ ವೈವಿಧ್ಯಮಯ ಸಾಂಸ್ಕೃತಿಕ ಅನುಭವಗಳನ್ನು ಸಾಹಿತ್ಯದ ಮೂಲಕ ದಾಖಲಿಸಲು ವಸಾಹತು ಶಿಕ್ಷಣವು ಪ್ರೇರಣೆಯಾಯಿತು. ಪಾಶ್ಚಾತ್ಯ ವೈಚಾರಿಕತೆ ಮತ್ತು ಜಾಗತಿಕ ಸಾಹಿತ್ಯದ ಪರಿಚಯದಿಂದ ಕನ್ನಡ ಸಾಹಿತ್ಯ ಚರಿತ್ರೆ ಶ್ರೀಮಂತಗೊಂಡಿತು. ಆದರೆ, ಈ ಪ್ರಕ್ರಿಯೆಯ ಇನ್ನೊಂದು ಮುಖವೆಂದರೆ, ವಸಾಹತುಶಾಹಿ ಆಡಳಿತ ಪದ್ಧತಿ ಮತ್ತು ಇಂಗ್ಲಿಷ್ ಶಿಕ್ಷಣ ನೀತಿಯು ಭಾರತೀಯ ದೇಶಿ ಭಾಷೆಗಳ ಹಾಗೂ ಸಾಂಸ್ಕೃತಿಕ ಸ್ವಾಯತ್ತತೆಯ ಮೇಲೆ ತೀವ್ರ ನಕಾರಾತ್ಮಕ ಪರಿಣಾಮಗಳನ್ನು ಬೀರಲು ಆರಂಭಿಸಿತು. 'ಹೊಸಗನ್ನಡ ಕಾವ್ಯವು ಈ ವಸಾಹತುಶಾಹಿ ಸಂಸ್ಕೃತಿಯು ರೂಪಿಸಿದ ಜೀವನದ ಹೊಸ ಸವಾಲುಗಳು ಮತ್ತು ಪರಂಪರೆಯ ಮೌಲ್ಯಗಳ ನಡುವಿನ ಸಂಕಟ ಹಾಗೂ ಸಂಘರ್ಷದ ಬಿಕ್ಕಟ್ಟಿನಿಂದಲೇ ತನ್ನನ್ನು ತಾನು ಕಟ್ಟಿಕೊಂಡಿತು'. ಕುವೆಂಪು ಅವರು ತಮ್ಮ ಕಥೆ, ಕಾದಂಬರಿ ಮತ್ತು ವಿಚಾರ ಸಾಹಿತ್ಯದಲ್ಲಿ ಮಾತ್ರವಲ್ಲದೆ, ಕಾವ್ಯದ ದೃಶ್ಯರೂಪಕಗಳಲ್ಲೂ ಈ ಶೈಕ್ಷಣಿಕ ಸಂಕಟವನ್ನು ಅತ್ಯಂತ ಆಳವಾಗಿ ಅಭಿವ್ಯಕ್ತಿಪಡಿಸಿದ್ದಾರೆ.

**ವಿಶ್ವವಿದ್ಯಾಲಯದ ಪರಿಕಲ್ಪನೆ ಮತ್ತು ಜ್ಞಾನಮೀಮಾಂಸೆ**

ಕುವೆಂಪು ಅವರು ಮೂಲಭೂತವಾಗಿ ಶಿಕ್ಷಣ ವಿರೋಧಿಯಲ್ಲ; ಬದಲಿಗೆ ಅವರು ಜ್ಞಾನದ ಉದಾತ್ತೀಕರಣವನ್ನು ಬಯಸಿದವರು. ತಾವೇ ಸ್ವತಃ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ

ಕಾರ್ಯನಿರ್ವಹಿಸಿದ ಶೈಕ್ಷಣಿಕ ಅನುಭವ ಅವರ ಕಾವ್ಯಕ್ಕೆ ಒದಗಿಬಂದಿತ್ತು. ಅವರ 'ವಿಶ್ವವಿದ್ಯಾನಿಲಯದ ರಜತೋತ್ಸವ' ಕವಿತೆಯಲ್ಲಿ ವಿದ್ಯಾನಿಲಯದ ಶ್ರೇಷ್ಠತೆಯನ್ನು ಹೀಗೆ ಗುರುತಿಸುತ್ತಾರೆ:

**''ವಿಶ್ವವಿದ್ಯಾಮಾತೆ**
**ಬುದ್ಧಿಗನ್ನವನಿತ್ತೆ**
**ಹೃದಯಕಮೃತವನಿತ್ತೆ.**
**ನಿನ್ನ ಬೆಳಕಿಗೆ**
**ಪೊಕ್ಕ ಕವಿ ಋಷಿ ಕೃತಿಯರಸ ಸುಖವನೀಂಟಿದೆನ್''**

**(ಕುವೆಂಪು ಸಮಗ್ರ ಕಾವ್ಯ, ಪು.440)**

ಇಲ್ಲಿ 'ಬುದ್ಧಿಗೆ ಅನ್ನ' ಮತ್ತು 'ಹೃದಯಕ್ಕೆ ಅಮೃತ' ಎಂಬ ರೂಪಕಗಳು ಶಿಕ್ಷಣದ ನಿಜವಾದ ಆಶಯವನ್ನು ಧ್ವನಿಸುತ್ತವೆ. ಇದು ಕೇವಲ ಉದ್ಯೋಗದ ಆಧಾರಿತ ತರಬೇತಿಯಾಗದೆ, ಮನುಷ್ಯನ ಬೌದ್ಧಿಕ ಹಸಿವನ್ನು ನೀಗುವ ಮತ್ತು ಭಾವನಾತ್ಮಕ ವಿಕಾಸವನ್ನು ಉಂಟುಮಾಡುವ ಕೇಂದ್ರವಾಗಬೇಕು ಎಂಬುದು ಕವಿಯ ಆಶಯವಾಗಿದೆ. ಸಾಹಿತ್ಯದಿಂದ ರಸಸುಖವನ್ನು ಒದಗಿಸಿದ ವಿದ್ಯಾನಿಲಯವನ್ನು ಅವರು ಅಸತ್ತಿನಿಂದ ಸತ್ತಿನೆಡೆಗೆ, ತಮಸ್ಸಿನಿಂದ ಜ್ಯೋತಿಯೆಡೆಗೆ ಮುನ್ನಡೆಸುವ ''ಭಗವತಿ ಶ್ರೀ ಸರಸ್ವತಿ'' ಎಂದು ಕರೆಯುತ್ತಾರೆ. ಹೀಗೆ ಅಕ್ಷರ ಜಗತ್ತಿನ ವಿಸ್ತರಣೆಯನ್ನು ಸ್ವಾಗತಿಸುವ ಕವಿಗೆ, ಕಾಲಾಂತರದಲ್ಲಿ ಶಿಕ್ಷಣ ಕ್ಷೇತ್ರವನ್ನು ಆವರಿಸಿಕೊಂಡ 'ಬೋಧನಾ ಕ್ರಮದ ವಿಪರ್ಯಾಸಗಳು' ತೀವ್ರ ಆತಂಕವನ್ನುಂಟುಮಾಡುತ್ತವೆ.

## ಇಂಗ್ಲಿಷ್ ಮಾರಿ ಮತ್ತು ಬಲಾತ್ಕಾರದ ಶಿಕ್ಷಣ ಪದ್ಧತಿ

ವಸಾಹತುಶಾಹಿ ಶಿಕ್ಷಣದ ಫಲವಾಗಿ ಜಾರಿಗೆ ಬಂದ ಇಂಗ್ಲಿಷ್ ಭಾಷೆಯು ಜಾಗತಿಕ ಜ್ಞಾನದ ಆಕರವಾಗಿ ಒದಗಿಬಂದಿದ್ದನ್ನು ಒಪ್ಪುವ ಕುವೆಂಪು, ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅದು ದೇಶೀಯ ಮಕ್ಕಳ ಪ್ರತಿಭೆಯನ್ನು ಚಿವುಟುವ ಮಾರಿಯಾಗಿ ಬದಲಾಗುತ್ತಿರುವುದನ್ನು ತೀವ್ರವಾಗಿ ಖಂಡಿಸುತ್ತಾರೆ:

**''ಗಾಂಧಿಯಿಂದಿಂಗ್ಲಿಷಿನ ದಾಸ್ಯದಿಂ ಪಾರಾದೆ;**
**ಅವನ ಕೊಂದಿಂಗ್ಲಿಷಿಗೆ ದಾಸಿಯಾದೆ**
**ಓ ಭಾರತಿಯೆ, ಚೀಣಿಯರನೆ ಮಿರಿ**
**ಹಿಂಡುತಿದೆ ಕಂದರನು ಇಂಗ್ಲಿಷಿನ ಮಾರಿ!''**

**(ಅದೇ, ಪು.442).**

ಡಾ.ಕೆ.ಸಿ. ಶಿವಾರೆಡ್ಡಿಯವರು ವಿಶ್ಲೇಷಿಸುವಂತೆ, ''ಕುವೆಂಪು ಅವರಿಗೆ ಇಂಗ್ಲಿಷ್ ಭಾಷೆ ಹೊತ್ತುತರುವ ಆಧುನಿಕ ವಿಚಾರಧಾರೆಯ ಬಗೆಗೆ ನಿರಂತರ ಒಲವಿತ್ತು. ಆದರೆ, ಶಿಕ್ಷಣದ ಮಾಧ್ಯಮವಾಗಿ ದೇಶೀಯ ಸಂಸ್ಕೃತಿಯ ಮೇಲೆ ಇಂಗ್ಲಿಷ್ ಭಾಷೆಯು ಉಂಟುಮಾಡುವ ದುಷ್ಪರಿಣಾಮಗಳನ್ನು ಮತ್ತು ಕಡ್ಡಾಯದ ಹೆಸರಿನಲ್ಲಿ

ಮಕ್ಕಳ ಮೇಲೆ ಹೇರುವ ಬಲಾತ್ಕಾರವನ್ನು ಕಂಡಾಗ ಅವರ ಕಾವ್ಯವು ತೀಕ್ಷ್ಣವಾದ ಸಾಂಸ್ಕೃತಿಕ ಪ್ರತಿರೋಧದ ಮೊನಚನ್ನು ಪಡೆಯುತ್ತದೆ." ಕವಿಯ ಆಕ್ರೋಶವಿರುವುದು ಭಾಷೆಯ ಮೇಲಲ್ಲ, ಬದಲಿಗೆ ಆ ಭಾಷೆಯನ್ನು ಹೇರುವ ವ್ಯವಸ್ಥೆಯ ಮೇಲಿದೆ:

**"ಬಲಾತ್ಕಾರಕ್ಕಾಗಿ ಮಾತ್ರವೇ ಹೊರತು ಈ ರೋಷ**
**ಭಾಷೆಗಾಗಿ ನಮ್ಮ ದ್ವೇಷವೇನಿಲ್ಲ**
**ತೆಗೆಯಿರಿ ಬಲಾತ್ಕಾರದಂಶವನು; ಆರಿಸಲಿ**
**ಸರ್ವರೂ ಇಂಗ್ಲಿಷನೆ, ಚಿಂತೆ ಇನಿತಿಲ್ಲ"**

**(ಕುವೆಂಪು ಸಮಗ್ರ ಕಾವ್ಯ, ಪು.441).**

ಅಗತ್ಯ ಮತ್ತು ಆಸಕ್ತಿ ಇರುವವರು ಭಾಷೆಯನ್ನು ಕಲಿಯಲಿ, ಆದರೆ ಇಡೀ ಗ್ರಾಮೀಣ ಯುವ ಸಮುದಾಯದ ಮೇಲೆ ಇಂಗ್ಲಿಷನ್ನು ಪರೀಕ್ಷೆಯ ನೆಪದಲ್ಲಿ ಹೇರಿ ಅವರ ಭವಿಷ್ಯವನ್ನು ಬಲಿಪೀಠಕ್ಕೆ ತಳ್ಳುವ ನೀತಿಯನ್ನು ಕುವೆಂಪು 'ಸಾಂಸ್ಕೃತಿಕ ಕೊಲೆ' ಎಂದು ಕರೆಯುತ್ತಾರೆ. "ಇಂಗ್ಲಿಷಿನ ಚಪ್ಪಡಿಯಡಿ ಹಸುಳೆ ಚೀತ್ಕಾರ" ಕೇಳದ ಅಧಿಕಾರಶಾಹಿಯ ಜಾಣ ಕಿವುಡುತನವನ್ನು ಕಾವ್ಯವು ನೇರವಾಗಿ ಪ್ರಶ್ನಿಸುತ್ತದೆ.

## ತ್ರಿಭಾಷಾ ಸೂತ್ರದ ರಾಜಕಾರಣ ಮತ್ತು ಶೈಕ್ಷಣಿಕ ಅಸಂಗತತೆ

ಕುವೆಂಪು ಅವರ ಮುಂಗಾಣ್ಕೆ ಅತ್ಯಂತ ತೀಕ್ಷ್ಣವಾಗಿ ಪ್ರಕಟವಾಗುವುದು ಅವರು ಅಂದಿನ ಸರ್ಕಾರಗಳು ಜಾರಿಗೆ ತಂದ 'ತ್ರಿಭಾಷಾ ನೀತಿ'ಯನ್ನು ವಿರೋಧಿಸಿದ ಸಂದರ್ಭದಲ್ಲಿ. ಆಡಳಿತಶಾಹಿಯು ರೂಪಿಸುವ ಯೋಜನೆಗಳು ಸಾಮಾನ್ಯ ಗ್ರಾಮೀಣ ವಿದ್ಯಾರ್ಥಿಗಳ ಪಾಲಿಗೆ ಹೇಗೆ ಉರುಳಾಗುತ್ತವೆ ಎಂಬುದನ್ನು ಅವರು ಕಾವ್ಯಾತ್ಮಕವಾಗಿ ಹೀಗೆ ಬರೆಯುತ್ತಾರೆ:

**"ಚೂರು ತಿಂಡಿಗೆ ಸಿಕ್ಕಿಸಿಹರೊ ಈ ಮೂರು ಗಾಳ;**
**ನುಂಗದಿದ್ದರೆ ಹಸಿವೆ; ನುಂಗಿದರೆ ಪ್ರಾಣಶೂಲ!"**

**(ಅದೇ, ಪು.441).**

ಡೆಲ್ಲಿಯ ಮಂತ್ರಿಗಳಾಗುವ ರಾಜಕಾರಣಿಗಳಿಗೆ ಅಥವಾ ಇಂಗ್ಲೆಂಡಿನ ರಾಯಭಾರಿಗಳಾಗುವ ಶ್ರೀಮಂತರ ಹಿತಾಸಕ್ತಿಗಾಗಿ, ಹಳ್ಳಿಯಲ್ಲೇ ಬದುಕಿ ಬಾಳಿ ಸಾಯುವ ಸಾಮಾನ್ಯ ರೈತನ ಮಗನ ಮೇಲೆ ಮೂರು ಭಾಷೆಗಳ ಬಲಾತ್ಕಾರದ ಸವಾರಿ ಏಕೆ ಎಂಬುದು ಕವಿಯ ಮೂಲಭೂತ ಶೈಕ್ಷಣಿಕ ಪ್ರಶ್ನೆಯಾಗಿದೆ. ಈ ಚಿಂತನೆಯು ಪ್ರಸ್ತುತ ಜಾಗತೀಕರಣದ ಕಾಲದಲ್ಲೂ ಅತ್ಯಂತ ಪ್ರಸ್ತುತವಾಗಿದೆ. ಕಡ್ಡಾಯ ಶಿಕ್ಷಣದ ಹೆಸರಿನಲ್ಲಿ ವ್ಯಯವಾಗುತ್ತಿರುವ ಅಪಾರ ಶ್ರಮ ಮತ್ತು ಧನವು ಮಕ್ಕಳ ಸೃಜನಶೀಲತೆಯನ್ನು ವಿಕಾಸಗೊಳಿಸುವ ಬದಲು ಅವರನ್ನು ಕೇವಲ ಯಾಂತ್ರಿಕವಾಗಿಸುತ್ತಿದೆ.

ಕುವೆಂಪು ಅವರ ಶೈಕ್ಷಣಿಕ ಚಿಂತನೆಗಳನ್ನು ಅವರ ಸಮಗ್ರ ಕಾವ್ಯದ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ಶಿಕ್ಷಣವು ಮಗುವಿನ ಸಹಜ ವಿಕಾಸಕ್ಕೆ

ಪೂರಕವಾಗಿರಬೇಕೇ ಹೊರತು ಭಾಷಾ ದಾಸ್ಯದ ಹೊರೆಯಾಗಬಾರದು ಎಂಬುದು ಸ್ಪಷ್ಟವಾಗುತ್ತದೆ. ಇಂಗ್ಲಿಷ್ ಎಂಬ ಪರೀಕ್ಷಾ ರಾಕ್ಷಸನಿಗೆ ಹೆದರಿ ಇಂದಿಗೂ ಪ್ರತಿವರ್ಷ ಲಕ್ಷಾಂತರ ಗ್ರಾಮೀಣ ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣವನ್ನು ಅರ್ಧಕ್ಕೆ ಕೈಬಿಡುತ್ತಿರುವುದು ಕುವೆಂಪು ಅಂದು ವ್ಯಕ್ತಪಡಿಸಿದ ಆತಂಕ ನಿಜವಾಗಿರುವುದಕ್ಕೆ ಸಾಕ್ಷಿಯಾಗಿದೆ. ವಿಶ್ವವಿದ್ಯಾಲಯಗಳು ಮತ್ತು ಆಡಳಿತ ವ್ಯವಸ್ಥೆಯು ಕುವೆಂಪು ಅವರ ಶೈಕ್ಷಣಿಕ ದರ್ಶನವನ್ನು ಕೇವಲ ಭಾಷಣಗಳಿಗೆ ಸೀಮಿತಗೊಳಿಸದೆ, ನೀತಿ ನಿರೂಪಣೆಯಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ಇಂದಿನ ಜರ್ಜರಿತ ಶಿಕ್ಷಣ ವ್ಯವಸ್ಥೆಯ ಹಲವು ಸಾಂಸ್ಕೃತಿಕ ರೋಗಗಳಿಗೆ ಕುವೆಂಪು ಅವರ ಕಾವ್ಯ ಮತ್ತು ವೈಚಾರಿಕ ಚಿಂತನೆಗಳಲ್ಲಿ ದಿವ್ಯ ಔಷಧಿಯಿದೆ.

**ಪರಾಮರ್ಶನ ಗ್ರಂಥಗಳು:**

1. ಹನುಮಂತಯ್ಯ ಎಲ್. (ಸಂ.), (2006), ಸಾಹಿತ್ಯ ಕರ್ನಾಟಕ, ಬೆಂಗಳೂರು: ಗ್ರಂಥಾಲಯ ಸಮಿತಿ.
2. ಶಿವಾರೆಡ್ಡಿ ಕೆ.ಸಿ., (2009), ಕನ್ನಡದ ಹಾಡು–ಪಾಡು, ಬೆಂಗಳೂರು: ಅಧ್ಯಯನ ಮಂಡಲ.
3. ಶಿವಾರೆಡ್ಡಿ ಕೆ.ಸಿ. (ಸಂ.), (2006), ಕುವೆಂಪು ಸಮಗ್ರ ಕಾವ್ಯ ಸಂಪುಟ – 2, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.